**ದಿನಾಂಕ: 10.10.2013ರಂದು ನಡೆದ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧ ಹಾಗೂ ಶಾಶ್ವತ ಕುಡಿಯುವ ನೀರು ಪೂರೈಕೆ ವ್ಯವಸ್ಥೆ ಕಲ್ಪಿಸುವ ಸಂಬಂಧ ಅನುಷ್ಠಾನಗೊಳಿಸಬೇಕಾಗಿರುವ ಕುಡಿಯುವ ನೀರು ಸರಬರಾಜು ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು**

1. ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕು DBOT ಕುಡಿಯುವ ನೀರಿನ ಯೋಜನೆಯ ಟೆಂಡರ್‌ಗೆ ಸಂಬಂಧಿಸಿದ ಅನುಷ್ಠಾನ ಕುರಿತಂತೆ CE,PRED ಹಾಗೂ ನಿರ್ದೇಶಕರು SWSMರವರು ವಸ್ತುಸ್ಥಿತಿ ಕುರಿತು ಸಭೆಗೆ ತಿಳಿಸಿದರು. ನಿರ್ದೇಶಕರು, SWSM ಈ ಬೃಹತ್ ಯೋಜನೆಯ ಸ್ಥಳ ಪರಿಶೀಲನೆ ಮಾಡಿರುವುದಾಗಿ ಹಾಗೂ ನಿರ್ಧರಿತವಾಗಬೇಕಾದ ಪ್ರಮುಖ ಕರಾರು ಪತ್ರ ಕುರಿತಂತೆ ಮನವರಿಕೆ ಮಾಡಿದರು.
2. ಈ ಸಲುವಾಗಿ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 153 ಗ್ರಾನೀಸ(5)2012, ಬೆಂಗಳೂರು, ದಿನಾಂಕ:18.07.2013 ಇದರಲ್ಲಿ ಈಗಾಗಲೇ ಹೇಳಿರುವ ಆದೇಶದ ಭಾಗ ಅಂಶ 4 ಕುರಿತಂತೆ ಚರ್ಚಿಸಲಾಯಿತು. ಮೆ॥ JITFರವರು DBOT ಅಂದರೆ ಯೋಜನೆಯ ವಿನ್ಯಾಸ ತಯಾರಿಕೆ, ಅನುಷ್ಠಾನ ಹಾಗೂ ಯೋಜನೆ ಕಾರ್ಯಚರಣೆ ಮತ್ತು ನಿರ್ವಹಣೆಯ ಸಂಪೂರ್ಣ ಜವಾಬ್ದಾರಿ ಸಂಸ್ಥೆಗೆ ಸೇರಿರುವುದರಿಂದ ಹಾಗೂ ಅಂದಾಜು ವೆಚ್ಚದಲ್ಲಿ ಇವುಗಳ ಎಲ್ಲಾ ವೆಚ್ಚ ಅಳವಡಿಸಿರುವುದರಿಂದ, ಇದಕ್ಕೆ ಸಂಬಂಧಿಸಿದಂತೆ EMD ಸಹ ಠೇವಣಿಯಿರಿಸಿರುವುದರಿಂದ, ಒಂದೇ ಕರಾರು ಪತ್ರ ಮಾಡಿ ಯೋಜನೆಯ ಅನುಷ್ಠಾನಕ್ಕೆ ಚಾಲನೆ ನೀಡಲು ವಿನಂತಿಸಿದ್ದರು.

ಈ ಕುರಿತಂತೆ ಸವಿಸ್ತಾರವಾಗಿ ಚರ್ಚಿಸಿ ನಂತರ ಕೆಳಕಂಡಂತೆ ನಿರ್ಣಯಿಸಲಾಯಿತು.

- ಈಗಾಗಲೇ SLEC ಮತ್ತು ಸಚಿವ ಸಂಪುಟದಿಂದ ಅನುಮೋದನೆಯಾದಂತೆ ಸರ್ಕಾರ ಆದೇಶ ಹೊರಡಿಸಿರುವುದರಿಂದ ಹಾಗೂ ಉದ್ದೇಶಿತ ಪ್ರಾಂತೀಯ ಬಹುಗ್ರಾಮ ಯೋಜನೆ ರಾಜ್ಯದಲ್ಲಿ ಮೊದಲ ಬಾರಿಗೆ DBOT ಆಧಾರದ ಮೇರೆಗೆ ಅದರಲ್ಲೂ ಸಂಪೂರ್ಣ ಸರ್ಕಾರಿ ಬಂಡವಾಳ ಹೂಡಿಕೆಯಲ್ಲಿ ಅನುಷ್ಠಾನವಾಗಬೇಕಾಗಿರುವುದರಿಂದ, ಸದರಿ ಯೋಜನೆಯ DPRಗೆ DBOT ತಾಂತ್ರಿಕ ಸಮಿತಿ ಈ ಯೋಜನೆಯಡಿ ಅಗತ್ಯವಿರುವ ಪ್ರಮಾಣದ ಶುದ್ಧ ಕುಡಿಯುವ ನೀರಿನ ಪೂರೈಕೆ ವ್ಯವಸ್ಥೆಗೆ ಅಗತ್ಯವಿರುವ ಎಲ್ಲಾ ತಾಂತ್ರಿಕ ವಿನ್ಯಾಸಗಳು ಮತ್ತು ಕಾಮಗಾರಿಗಳು ಪೂರಕವಾಗಿರುವುದನ್ನು ಮತ್ತು ಬಂಡವಾಳ ಹಾಗೂ ಉತ್ಪಾದನಾ ವೆಚ್ಚ ಸೂಕ್ತವಾಗಿರುವುದನ್ನು ದೃಢಪಡಿಸತಕ್ಕದ್ದು. ಹೀಗೆ ಮಾಡುವುದರಿಂದ ಮೆ॥JITF ಹಾಗೂ ಸರ್ಕಾರವು ಈಗಾಗಲೇ ಹೊರಡಿಸಿರುವ ಆದೇಶಕ್ಕೆ ಬದ್ಧವಾಗಿರಲು ಅನುಕೂಲವಾಗಲಿದೆ.
- ಉಳಿದಂತೆ ಮೆ॥JITF ಸಲ್ಲಿಸಿದ ಪತ್ರನ್ನು ಪರಿಶೀಲಿಸಿ ಟೆಂಡರ್ ಮತ್ತು ಕರಾರಿನಲ್ಲಿರುವಂತೆ ಕ್ರಮ ಜರುಗಿಸಬೇಕೆಂದು ತಿರ್ಮಾನಿಸಲಾಯಿತು. ಟೆಂಡರ್- ಮತ್ತು ಕರಾರಿನಲ್ಲಿ ಇಲ್ಲದಿರುವ ಅಂಶಗಳ ಬಗ್ಗೆ CE, PRED ಪರಿಶೀಲಿಸಿ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸಲು ತಿಳಿಸಲಾಯಿತು.

ಮೇಲ್ಕಂಡ ನಿರ್ಣಯಗಳೊಂದಿಗೆ ಸಭೆಯು ಮುಕ್ತಾಯವಾಯಿತು.

ಸಹಿ/-
(ಟಿ.ಎಂ. ವಿಜಯ ಭಾಸ್ಕರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಗ್ರಾಅಪ 153 ಗ್ರಾನೀಸ (5) 2012 ದಿನಾಂಕ:25.10.2013

ಗೆ:
ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ.

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ (ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
**ಇಮೇಲ್: rk3452000@yahoo.co.in**
**ಫೋನ್:22032806, ಫ್ಯಾಕ್ಸ್:22203175**

ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧ ಹಾಗೂ ಶಾಶ್ವತ ಕುಡಿಯುವ ನೀರು ಪೂರೈಕೆ ವ್ಯವಸ್ಥೆ ಕಲ್ಪಿಸುವ ಸಂಬಂಧ ಅನುಷ್ಠಾನಗೊಳಿಸಬೇಕಾಗಿರುವ ಕುಡಿಯುವ ನೀರು ಸರಬರಾಜು ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ದಿನಾಂಕ:10.10.2013ರಲ್ಲಿ ಹಾಜರಾದ ಅಧಿಕಾರಿಗಳು.

| ಕ್ರ. ಸಂ. | ಅಧಿಕಾರಿಗಳ ಹೆಸರು (ಶ್ರೀ / ಶ್ರೀಮತಿ) | ಪದನಾಮ |
|---|---|---|
| 1 | ಟಿ.ಎಂ.ವಿಜಯಭಾಸ್ಕರ್ | ಸರ್ಕಾರದ ಪ್ರಧಾನ ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ |
| 2 | ನವೀನ್ ರಾಜ್ ಸಿಂಗ್ | ನಿರ್ದೇಶಕರು SWSM ಮತ್ತು ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ |
| 3 | ಜಗನ್ನಾಥ್ ರೆಡ್ಡಿ | ಮುಖ್ಯ ಇಂಜಿನಿಯರ್, PRED, ಬೆಂಗಳೂರು |
| 4 | ಪ್ರಭಾಕರ ಹಮ್ಮಿಗೆ | ಅಧೀಕ್ಷಕ ಅಭಿಯಂತರರು, PRE ವೃತ್ತ ಮೈಸೂರು |
| 5 | ಕೆ.ಎಂ.ನಾಗರಾಜ್ | ಕಾರ್ಯಪಾಲಕ ಇಂಜಿನಿಯರ್ PRED, ಚನ್ನರಾಯಪಟ್ಟಣ |
| 6 | ಉಮೇಶ್ ಸಿಂಗ್ | Senior Manager, JITF Water Infrastructure Ltd., Jindal ITF Centre, 28, Shivaji Marg, New Delhi-110 015 |
| 7 | ವಿನೋದ್ ಜಿ.ಜಿ | JITF (Jindal), ಪ್ರತಿನಿಧಿ – ಎಂಜಲ್ ವಾಟರ್ ಸಲ್ಯೂಷನ್ ಪ್ರೈವೈಟ್ ಲಿ., ಸಂಖ್ಯೆ.90, ಮಡಿವಾಳ ಹೊಸೂರು ರಸ್ತೆ, ಬೆಂಗಳೂರು-68 |
| 8 | ಈಶ್ವರ್ ಎ.ಪಿ | |
| 9 | ರಾಮಕೃಷ್ಣ | ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ) , ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ |

ಗೆ:

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾಸನ ರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕೋರಿ ಕಳುಹಿಸಿದೆ.